ಬಾಲರ ಪಟ್ಟಣದವರೆಗೆ 200 ಮಿ.ಮೀ. ವ್ಯಾಸದ ಡಿ.ಐ. ಏರು ಕೊಳವೆ ಮಾರ್ಗವನ್ನು ಅಳವಡಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಬಂದಿದೆ.

ಪುರಸಭೆಯಿಂದ ಯೋಜನೆಯನ್ನು ತಯಾರಿಸಲು ಸರ್ವೆಗೆ ತಗಲುವ ಮೊಬಲಗನ್ನು ಮಂಡಲಿಗೆ ಠೇವಣಿಸಿದ ಕೂಡಲೇ ಸರ್ವೆ ಮಾಡಿ ಅಂದಾಜನ್ನು ತಯಾರಿಸಲಾಗುವುದು.

## ಹೊಸ ಜಿಲ್ಲೆಗಳಿಗೆ ಕಾರಾಗೃಹ ಅಭಿವೃದ್ಧಿ ನೀಡಿದ ಅನುದಾನ

316(734) - ಶ್ರೀ ಗುರುಸ್ವಾಮಿ, ಸಿ. (ಚಾಮರಾಜನಗರ): ಮಾನ್ಯ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸ ಜಿಲ್ಲೆಗಳ ಕಾರಾಗೃಹಗಳ ಅಭಿವೃದ್ಧಿಗೆ ನಿಗದಿಗೊಳಿಸಿದ, ಖರ್ಚು ಮಾಡಿದ ಹಣ ಎಷ್ಟು? ಜಿಲ್ಲಾವಾರು ಹಾಗೂ ಕ್ಷೇತ್ರವಾರು ವಿವರ ನೀಡುವುದು.

ಶ್ರೀ ರಾಜ ಅಮರೇಶ್ವರ ನಾಯಕ್ (ಬಂದೀಖಾನೆ ಸಚಿವರು):

ಅ) ಹೊಸ ಜಿಲ್ಲೆಗಳಲ್ಲಿನ ಕಾರಾಗೃಹಗಳ ಅಭಿವೃದ್ಧಿಗೆ ಪ್ರತ್ಯೇಕವಾಗಿ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. ಆದರೂ ಇಲಾಖೆಗೆ ಒದಗಿಸಿದ ಅನುದಾನದಿಂದ ಕಾರಾಗೃಹಗಳ ಆಡಳಿತವನ್ನು ನಡೆಸಲಾಗುತ್ತಿದೆ.

## ರಾಜ್ಯದಲ್ಲಿ ಜಲಸಂಪನ್ಮೂಲ ಜಲಸಂವರ್ಧನಾ ಯೋಜನೆ

317(735) - ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಲಸಂಪನ್ಮೂಲ ಜಲಸಂವರ್ಧನಾ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಕಳೆದವರ್ಷ ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಕ್ಷೇತ್ರಾವಾರು ವಿವರ ನೀಡುವುದು;

ಆ) ಪ್ರತಿ ಕಾಮಗಾರಿಗೆ ನಿಗಧಿಪಡಿಸಿದ್ದ ಹಣ ಎಷ್ಟು; ಕಾಮಗಾರಿವಾರು ಖರ್ಚಾದ ಹಣದ ವಿವರಗಳನ್ನು ನೀಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) 2000-2001 ಮತ್ತು 2001-02ನೇ ಸಾಲಿನಲ್ಲಿ ಜಲಸಂವರ್ಧನೆ ಯೋಜನೆಯಲ್ಲಿ ಯಾವುದೇ ಕಾಮಗಾರಿಗಳನ್ನು ರಾಜ್ಯದಲ್ಲಿ ಹಮ್ಮಿಕೊಂಡಿರುವುದಿಲ್ಲ. ಆದರೆ, ಜಲಸಂವರ್ಧನೆ ಯೋಜನೆಗೆ ವಿಶ್ವಬ್ಯಾಂಕಿನ ಹಣಕಾಸಿನ ನೆರವು ಪಡೆಯುವ ಪ್ರಸ್ತಾವನೆಯನ್ನು ಸಲ್ಲಿಸುವಾಗ ಪೂರಕವಾಗಿ 5 ಜಿಲ್ಲೆಗಳಲ್ಲಿ 15 ಕೆರೆಗಳ ಪ್ರಾಯೋಗಿಕ ಕೆಲಸಕ್ಕಾಗಿ ರೂ. 15.21,510-00 ಗಳನ್ನು ಬಿಡುಗಡೆ ಮಾಡಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಉದ್ಭವಿಸುವುದಿಲ್ಲ.

## ಅನುಬಂಧ

| ಕ್ರ. ಸಂ. | ಕೆರೆಯ ಹೆಸರು | ತಾಲ್ಲೂಕು | ಜಿಲ್ಲೆ | ಮೊದಲನೇ ಕಂತು | ಎರಡನೇ ಕಂತು | ಮೂರನೇ ಕಂತು | ನಾಲ್ಕನೇ ಕಂತು | ಒಟ್ಟು ಮೊತ್ತ |
|---|---|---|---|---|---|---|---|---|
| 1. | ಕೋಕಟ್ಟಿ, ಬಸ್ತವಾಡ ಗ್ರಾಮ | ರಾಯಬಾಗ್ | ಬೆಳಗಾಂ | 1,26,000-00 | 94,500-00 | 63,000-00 | | 2,93,000-00 |
| 2. | ದೇವಿ ಹೊಂಡ ಕೆರೆ, ದೇವಿ ಮೈಸೂರು ಗ್ರಾಮ | ಹಾರೇರಿ | ಹಾವೇರಿ | 1,22,000-00 | | | | 1,22,00-00 |
| 3. | ಚಳ್ಳಕಟ್ಟಿ ಕೆರೆ, ದೇವಿ ಹೊಸೂರು ಗ್ರಾಮ | ಹಾವೇರಿ | ಹಾವೇರಿ | 84,000-00 | | | | 84,000-00 |
| 4. | ಹಿರೇಕೆರೆ, ದೇವಿ ಹೊಸೂರು ಗ್ರಾಮ | ಹಾವೇರಿ | ಹಾವೇರಿ | 1,02,000-00 | | | | 1,02,000-00 |
| 5. | ಚಿಕ್ಕಮಲ್ಲೆ ಕೆರೆ, ಚಿಕ್ಕಮಲ್ಲೆ ಗ್ರಾಮ | ಮಾಲೂರು | ಕೋಲಾರ | 56,000-00 | 42,000-00 | | | 98,000-00 |
| 6. | ಹುಳದೇವನಹಳ್ಳಿಕೆರೆ, ಹುಳದೇವನಗ್ರಾಮ | ಮಾಲೂರು | ಕೋಲಾರ | 3,29,120.00 | | | | 3,29,120.00 |
| 7. | ಓಬಟ್ಟಿ ಕೆರೆ, ಓಬಟ್ಟಿ ಗ್ರಾಮ | ಮಾಲೂರು | ಕೋಲಾರ | 85,600-00 | | | | 85,600-00 |
| 8. | ಕಲಿ ಕೆರೆ, ಕಲಿಕೆರೆ ಗ್ರಾಮ | ಕೊಪ್ಪಳ | ಕೊಪ್ಪಳ | 48,960-00 | | | | 48,960-00 |
| 9. | ಲಿಬಿಗೆರೆ ಕೆರೆ, ಲಿಬಿಗೆರೆ ಗ್ರಾಮ | ಕೊಪ್ಪಳ | ಕೊಪ್ಪಳ | 59,160-00 | 44,370-00 | | | 1,03,530-00 |
| 10. | ಹುಂಜಿ ಕೆರೆ, ದುಂಬಿಗೆರೆ | ಹುಮ್ನಾಬಾದ್ | ಬೀದರ್ | 2,64,800-00 | | | | 2,64,800-00 |
| | | | ಒಟ್ಟು | 12,77,640-00 | 1,80,870-00 | 63,000-00 | | 15,21,510-00 |